## ದಿನಾಂಕಃ05.07.2025 ರಂದು ಸಾಕ್ಷಿಯನ್ನು ಕರೆಯಿಸಿ ಪ್ರಮಾಣ ವಚನ ಭೋದಿಸಲಾಯಿತು.

ಪಾಟೀಸವಾಲು ಆರೋಪಿ ಪರ ಶ್ರೀಃ ಡಿ ಆರ್ ವಿ ವಕೀಲರಿಂದಃ

ನನಗೆ ಆರೋಪಿ 2013 ನೇ ಇಸವಿಯಿಂದ ಪರಿಚಯ. ನಾನು ಹಾಗೂ ಆರೋಪಿ ಒಂದೇ ದಿನ ಕೆಲಸಕ್ಕೆ ಸೇರಿರುತ್ತೇವೆ ಎಂದರೆ ಸರಿ. ಇಬ್ಬರೂ ಹುಣಸೂರಿನ ಡಿಪೋಗೆ ನೇಮಕಗೊಂಡಿರುತ್ತೇವೆ. ನಾವಿಬ್ಬರೂ ಒಳ್ಳೆಯ ಸ್ನೇಹಿತರು ಎಂದರೆ ಸರಿ. ನನಗೆ ರೂ.50,000 ಗಳ ವೇತನ ಬರುತ್ತದೆ. ಆರೋಪಿಗೂ ಸಹ ಅಷ್ಟೇ ಸಂಬಳ ಬರುತ್ತಿದೆ ಎಂದರೆ ನನಗೆ ಗೊತ್ತಿಲ್ಲ. ನನ್ನ ಹಾಗೂ ಆರೋಪಿಯ ನಡುವೆ ವ್ಯವಹಾರವನ್ನು ತೋರಿಸಲು ಈ ಪ್ರಕರಣದಲ್ಲಿ ಹಾಜರುಪಡಿಸಿರುವ ದಾಖಲಾತಿಗಳನ್ನು ಹೊರತುಪಡಿಸಿ ಬೇರೆ ಯಾವುದೇ ದಾಖಲಾತಿಗಳು ಇರುವುದಿಲ್ಲ. ನನ್ನ ಹಾಗೂ ಆರೋಪಿಯ ನಡುವೆ ಯಾವುದೇ ಬ್ಯಾಂಕ್ ಅಥವಾ ಆನ್ ಲೈನ್ ನಲ್ಲಿ ಹಣದ ವ್ಯವಹಾರ ನಡೆದಿರುವುದಿಲ್ಲ. ನೀವು ಆರೋಪಿಗೆ ಹಣವನ್ನು ನೀಡಿದ್ದು ಎಂದು ಹೇಳಿದ್ದು, ನಾನು ಹಣವನ್ನು ನೀಡುವಾಗ ಯಾರೂ ಇರಲಿಲ್ಲ.

ನಾನು ಪ್ರತಿವರ್ಷ ನಮ್ಮ ಇಲಾಖೆಗೆ ವಾರ್ಷಿಕ ಆದಾಯ ಹಾಗೂ ಖರ್ಚುಗಳ ವಿಚಾರವನ್ನು ತಿಳಿಸುತ್ತೇನೆ. ಆಸ್ತಿ ಋಣಭಾರ ಪತ್ರದಲ್ಲಿ ಆ ಬಗ್ಗೆ ತಿಳಿಸಿರುತ್ತೇವೆ. ಅದರಲ್ಲಿ ಇಡೀ ವರ್ಷದ ವ್ಯವಹಾರದ ಬಗ್ಗೆ ನಮೂದು ಮಾಡಿ ತಿಳಿಸಿರುತ್ತೇನೆ. ನಾನು ಆರೋಪಿಗೆ ದಿಃ10.07.2021 ರಂದು ಹಣವನ್ನು ನೀಡಿರುತ್ತೇನೆ. ದಿಃ10.07.2021 ರಂದು ಹಣವನ್ನು ನೀಡಿರುವ ಬಗ್ಗೆ ನನ್ನ ಬಳಿ ಯಾವುದೇ ದಾಖಲಾತಿ ಇರುವುದಿಲ್ಲ. ನಾನು ಹಣವನ್ನು ನೀಡಿದ 6 ತಿಂಗಳೊಳಗೆ ಹಣವನ್ನು ವಾಪಸ್ಸು ನೀಡುವಂತೆ ಕೇಳಿರುತ್ತೇನೆ. ನಾನು 2,50,000 ಲಕ್ಷಗಳನ್ನು ನೀಡಿರುತ್ತೇನೆ. ಆ ಸಮಯದಲ್ಲಿ ನನ್ನ ಬಳಿ ಅಷ್ಟು ಹಣ ಇತ್ತು ಎಂದು ತೋರಿಸಲು ದಾಖಲಾತಿಗಳು ಇವೆ, ಅದನ್ನು ಹಾಜರುಪಡಿಸುತ್ತೇನೆ. ನ್ಯಾಯಾಲಯಕ್ಕೆ ಮುಂದಿನ ಸುನಾವಣೆಯಂದು ಆ ದಾಖಲೆಗಳನ್ನು ಹಾಜರುಪಡಿಸುತ್ತೇನೆ. ನಾನು ನನ್ನ ವೇತನ ಚೀಟಿಯನ್ನು ಹಾಜರುಪಡಿಸುತ್ತೇನೆ.

ನಾನು ನಗದುರೂಪದಲ್ಲಿ ಹಣವನ್ನು ನೀಡಿರುತ್ತೇನೆ. ನನಗೆ ಬ್ಯಾಂಕ್ ಖಾತೆಯ ಮೂಲಕ ಹಣವನ್ನು ವರ್ಗಾವಣೆ ಮಾಡಲು ಯಾವುದೇ ತೊಂದರೆ ಇರಲಿಲ್ಲ. ನನಗೆ ಹೆಚ್ಚಿನ ಹಣವನ್ನು ಬ್ಯಾಂಕ್ ನ ಮುಖಾಂತರ ವ್ಯವಹಾರ ಮಾಡಬೇಕೆಂದು ತಿಳಿದಿರುವುದಿಲ್ಲ. ನಾನು ಬಿಳಿಕೆರೆಯಲ್ಲಿ ವಾಸವಾಗಿದ್ದೆ, ಈಗ 2 ವರ್ಷಗಳಿಂದ ಮೈಸೂರಿನಲ್ಲಿ ವಾಸವಾಗಿದ್ದೇ. ನನ್ನ ಕುಟುಂಬ ನಿರ್ವಹಣೆಗೆ ರೂ.10,000/-

ಖರ್ಚಾಗುತ್ತದೆ. 2019-20 ನೇ ಇಸವಿಯಲ್ಲಿ ನನ್ನ ಸಂಬಳ 35000-40000 ವರೆಗೂ ಇತ್ತು. ನಿಸಿ 7(ಎ) ರಲ್ಲಿ ಬರೆದಿರುವ ವಿಚಾರಗಳು ನನಗೆ ತಿಳಿದಿದೆ. ನಾನೇ ಅದರ ಒಕ್ಕಣೆಯನ್ನು ಹೇಳಿ ಬರೆಸಿರುತ್ತೇನೆ. ನಿಸಿ7(ಎ) ರಲ್ಲಿ ನಾನು ಮೈಸೂರಿನ ವಾಸಿ ಎಂದು ಬರೆಸಿದ್ದೇನೆ ಎಂದರೆ ಸರಿ. 6 ತಿಂಗಳ ನಂತರ ನಾನು ಆರೋಪಿಗೆ ಹಣವನ್ನು ವಾಪಸ್ಸು ಕೇಳಿದ್ದೆ ಎಂದು ನಿಸಿ7(ಎ) ರಲ್ಲಿ ಬರೆಸಿದ್ದೀರಿ ಎಂದರೆ ಇರಬಹುದು. ನಿಮ್ಮ ದೂರಿನಲ್ಲಿಯೂ ಸಹ 6 ತಿಂಗಳ ನಂತರ ನಾನು ಆರೋಪಿಗೆ ಹಣವನ್ನು ವಾಪಸ್ಸು ಕೇಳಿದ್ದೆ ಎಂದು ಬರೆಸಿದ್ದೀರಿ ಎಂದರೆ ಇರಬಹುದು. ದೂರನಲ್ಲಿ ಬರೆದಿರುವ ವಿಚಾರಗಳು ನನಗೆ ತಿಳಿದಿದೆ. ಅದನ್ನು ನಾನೇ ಹೇಳಿ ಬರೆಸಿರುವುದು. ನೀವು ನಿಮ್ಮ ಸ್ವ ಹೇಳಿಕೆಯಲ್ಲೂ ಸಹ 6 ತಿಂಗಳ ನಂತರ ನಾನು ಆರೋಪಿಗೆ ಹಣವನ್ನು ವಾಪಸ್ಸು ಕೇಳಿದ್ದೆ ಎಂದು ಬರೆಸಿದ್ದೀರಿ ಎಂದರೆ ಸರಿಯಲ್ಲ.6 ತಿಂಗಳ ನಂತರ ನೀವು ಆರೋಪಿಗೆ ಹಣವನ್ನು ವಾಪಸ್ಸು ಕೇಳಿದಾಗ ನಿಸಿ1 ನ್ನು ಆರೋಪಿ ನೀಡಿದ್ದಾರೆಂದು ಬರೆಸಿದ್ದೀರಿ ಎಂದರೆ ಸರಿಯಲ್ಲ, ಸಾಕ್ಷಿ ಮುಂದುವರಿದು ನಾನು 6 ತಿಂಗಳ ಮುನ್ನವೇ ಹಣವನ್ನು ಕೇಳಿದ್ದೇನೆ, ಅವರು ಡಿಸೆಂಬರ್ ನಲ್ಲಿ ನಿಸಿ1 ನ್ನು ನೀಡಿದ್ದಾರೆ. ನೀವು ಆರೋಪಿ 6 ತಿಂಗಳೊಳಗೆ ಹಣವನ್ನು ಕೇಳಿದ್ದ ಬಗ್ಗೆ ನಿಮ್ಮ ನೋಟಿಸ್ ನಲ್ಲಾಗಲೀ, ದೂರಿನಲ್ಲಾಗಲೀ ಮತ್ತು ಸ್ವ ಹೇಳಿಕೆಯಲ್ಲಾಗಲೀ ಬರೆಸಿರುವುದಿಲ್ಲ ಎಂದರೆ ಸರಿ. ಆ ರೀತಿ ಬರೆಸಲು ನನಗೆ ಯಾವುದೇ ತೊಂದರೆ ಇರುವುದಿಲ್ಲ.

ಸಮಯಾವಕಾಶ ನೀಡಿ ಮುಂದುವರಿದ ಪಾಟೀಸವಾಲನ್ನು ಮುಂದೂಡಲಾಯಿತು.

ತೆರೆದ ನ್ಯಾಯಾಲಯದಲ್ಲಿ ನನ್ನ ಉಕ್ತಲೇಖನದಂತೆ ಬೆರಳಚ್ಚು ಮಾಡಲಾಯಿತು.

ಓ.ಹೇ.ಕೇ.ಸರಿ ಇದೆ.

ಅಪರ ಸಿವಿಲ್ ಮತ್ತು ಜೆ.ಎಂ.ಎಫ್.ಸಿ.
ನ್ಯಾಯಾಧೀಶರು, ಹುಣಸೂರು.